

## ಕೂಗುತ್ತಿದ್ದಾರೆ!

ಮಂಗಳೂರಿನಲ್ಲಿ ಬ್ಯಾಂಕ್ ಉದ್ಯೋಗಿಯಾಗಿದ್ದ ಸ್ನೇಹಿತಬ್ಬರು ಬೆಂಗಳೂರಿಗೆ ವರ್ಗವಾಗಿ ಹೋದರು. ಕಚೇರಿಗೆ ಹಾಜರಾದ ಮೊದಲ ದಿನ ಪೇದೆ ಬಂದು ಅವರ ಬಳಿ, 'ಮ್ಯಾನೇಜರ್ ಸಾಹೇಬರು ಕೂಗುತ್ತಿದ್ದಾರೆ' ಎಂದ. ಗಾಬರಿಗೊಂಡ ಇವರು, 'ಅಯ್ಯೋ ದೇವರೇ, ಅಂಥಾದ್ದೇನಾಯಿತು ಅವರಿಗೆ... ಬೆಳಗ್ಗೆ ಸರಿಯಾಗಿಯೇ ಇದ್ದರಲ್ಲ.. ಮನೆಯಿಂದ ಕೆಟ್ಟ ಸುದ್ದಿಯೇನಾದರೂ ಬಂತೆ?' ಎನ್ನುತ್ತಾ ಪ್ರಶ್ನೆಗಳ ಸುರಿಮಳೆಗರೆದರು.

ಆಗ ಪೇದೆ ಸಾವಕಾಶವಾಗಿ, 'ಅಂಥಾದ್ದೇನೂ ಆಗಿಲ್ಲ ಸಾರ್, ಅವರು ನಿಮ್ಮನ್ನು ಕೂಗುತ್ತಿದ್ದಾರೆ ಅಂದರೆ ಕರೆಯುತ್ತಿದ್ದಾರೆ...' ಎಂದಾಗ ಮಂಗಳೂರು ಭಾಷೆಯ ಪ್ರಕಾರ ಕೂಗುತ್ತಿದ್ದಾರೆ ಅಂದರೆ ಅಳುತ್ತಿದ್ದಾರೆ ಎಂದು ಭಾವಿಸಿದ್ದ ನನ್ನ ಸ್ನೇಹಿತರಿಗೆ ತಮ್ಮ ತಪ್ಪಿನ ಅರಿವಾಯಿತು. ಕ್ರಮೇಣ ಬೆಂಗಳೂರು ಕನ್ನಡದ ಪರಿಚಯವೂ ಆಯಿತು.

**ರಮಣ್ ಶೆಟ್ಟಿ ರೆಂಜಾಳ್**

## ಮತ್ತೆ ಹಾರಿರಬಹುದಲ್ವಾ?

ನಮ್ಮ ಹತ್ತಿರದ ಬಂಧುಗಳೊಬ್ಬರಿಗೆ ಹುಷಾರಿಲ್ಲದ ಕಾರಣ ಅವರನ್ನು ನೋಡಿಕೊಂಡು ಬರಲು ನಮ್ಮ ಸತ್ಯಮಾವನ ಜೊತೆಗೆ ಅವರ ಮನೆಗೆ ಹೋಗಿದ್ದೆ. ಆಗ ಅವರು 'ಈಗ ಎಲ್ಲ ಕಡೆ 'ಚಿಕನ್ ಗುನ್ಯಾ', 'ವೈರಲ್ ಜ್ವರ' ಇರೋದ್ರಿಂದ ವೈದ್ಯರು ರಕ್ತಪರೀಕ್ಷೆ ಮಾಡಿಸಿ ನಂತರ ಚಿಕಿತ್ಸೆ ನೀಡುತ್ತೇವೆಂದು ಹೇಳಿದ್ದಾರೆ ಎಂದರು. ಅವರ ಮನೆ ಆಸ್ಪತ್ರೆಯ ಹಿಂಭಾಗವೇ ಇರುವುದರಿಂದ 'ಅಲ್ಲಿಯ ಸೊಳ್ಳೆಗಳು ರೋಗಿಗಳಿಗೆ ಕಚ್ಚಿ ಇಲ್ಲಿಗೆ ಬಂದಿರಬಹುದೇನೋ' ಎಂದು ಅವರ ಮಗ ಹೇಳುತ್ತಿದ್ದ. ಆಗ ನಮ್ಮ ದೊಡ್ಡಮ್ಮ, 'ಸೊಳ್ಳೆಗಳಿಗೆ ಹತ್ತು ಅಡಿಗಿಂತ ಮೇಲೆ ಹಾರಲು ಆಗುವುದಿಲ್ಲ ಇಲ್ಲಿಗೆ ಹೇಗೆ ಬರುತ್ತೆ?' ಎಂದರು. ಆಗ ನಮ್ಮ ಮಾವ 'ಈಗಿನ ಸೊಳ್ಳೆಗಳು ಮೊದಲು ಹತ್ತು ಅಡಿ ಹಾರಿ ಸ್ವಲ್ಪ ರೆಸ್ಟ್ ತಗೊಂಡು ಮತ್ತೆ ಹತ್ತು ಅಡಿ ಹಾರಿ ನಿಮ್ಮ ಮನೆಗೆ ಬಂದಿರಬಹುದಲ್ವಾ?' ಎಂದಾಗ ಅವರ ಮಾತಿಗೆ ಜ್ವರದಿಂದ ನರಳುತ್ತಿದ್ದವರ ಮುಖದಲ್ಲೂ ಮಂದಹಾಸ ಮೂಡಿತು!

**ಬಿ.ಎನ್. ಸಿಂಧು**

